942 (905) ಶ್ರೀ ರಘುಪತಿ ಭಟ್ ಕೆ (ಉಡುಪಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಈ ವರ್ಷದ ಮಳೆಗಾಲ ಪ್ರಾರಂಭದಲ್ಲಿಯೇ ಭೀಕರ ಕಡಲ್ಕೊರೆತ ಪ್ರಾರಂಭವಾಗಿ ಪಡುಕೆರೆ, ಬೇಂಗ್ರೆ, ಮರವಂತೆ, ಮಂಗಳೂರು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ಕರಾವಳಿ ತೀರದಲ್ಲಿ ರಾಷ್ಟ್ರೀಯ ಹೆದ್ದಾರಿ ಸಹಿತ ಅಪಾರ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಸರ್ಕಾರದ ಲಕ್ಷಾಂತರ ರೂ ಖರ್ಚು ಭರಿಸಿ ತಾತ್ಕಾಲಿಕ ಮರಳು ಚೀಲ ತುಂಬಿಸಿಡುವ ಬದಲು ಕೈಗೊಂಡ ಶಾಶ್ವತ ಕ್ರಮಗಳೇನು,

ಇ) ಚಾಲ್ತಿ ವರ್ಷದಲ್ಲಿ ನೆಲೆಚಿಮುಲ್ಲಿ ಕೈಗೊಂಡ ಜರೂರು ಪರಿಹಾರ ಕಾರ್ಯಕ್ರಮಗಳಾವುವು,

ಈ) ಶಾಶ್ವತ ತಡೆಗೋಡೆ ನಿರ್ಮಿಸುವ ಬಗೆಗಿನ ಪ್ರಸ್ತಾವನೆ ಈಗ ಯಾವ ಹಚಿತದಲ್ಲಿದೆ,

ಉ) ಕೇರಳ ಮಾದರಿಯ ಶಾಶ್ವತ ವರಿಹಾರ ಕ್ರಮಗಳನ್ನು ಯಾವಾಗ ಅನುಷ್ಠಾನಗೊಳ್ಳಲಾಗುವುದು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು

ಆ) ಮಳೆಗಾಲದಲ್ಲಿ ಸಂಭವಿಸುವ ಭೀಕರ ಸಮುದ್ರ ಕೊರೆತ ಮತ್ತು ಅಲೆಗಳ ರಭಸದಿಂದಾಗಿ ಆ ಸಮಯದಲ್ಲಿ ವಿನ್ಯಾಸದಂತೆ ತಡೆಗೋಡೆ ನಿರ್ಮಿಸಲು ಸಾಧ್ಯವಾಗುವುದಿಲ್ಲ ಆಗ ತುರ್ತು ಸಂರಕ್ಷಣೆ ಕ್ರಮವಾಗಿ ಮರಳು ಚೀಲಗಳಿಂದ ಬಂಡಿಂಗ್ ನಿರ್ಮಿಸಿ ಸಾರ್ವಜನಿಕ ಆಸ್ತಿವಾಸ್ತಿ ರಕ್ಷಣೆ ಮಾಡಲಾಗುತ್ತಿದೆ

ಮಳೆಗಾಲ ಮುಗಿದ ನಂತರ ಅನುದಾನ ಲಭ್ಯತೆಗನುಗುಣವಾಗಿ Central Water & Power Research Station (C W P R S), Pune ಅಥವಾ Karnataka Engineering Research Station (K E R S) ಮೈಸೂರುರವರು ಅಧ್ಯಯನ ಮಾಡಿ ನೀಡುವ ವಿನ್ಯಾಸದಂತೆ ಸಮುದ್ರ ತಡೆಗೋಡೆಗಳನ್ನು ನಿರ್ಮಿಸಲಾಗುತ್ತಿದೆ

ಇ) ಈವರೆಗೆ ಉಡುಪಿ ಜಿಲ್ಲೆಯಲ್ಲಿ 19 48 ಕಿ ಮೀ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 8 21 ಕಿ ಮೀ ಉದ್ದಕ್ಕೆ ಕಲ್ಲಿನಿಂದ ತಡೆಗೋಡೆ ನಿರ್ಮಿಸಲಾಗಿದೆ

ಪ್ರಸ್ತುತ ವರ್ಷ ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಸುಮಾರು 3354 ಮೀ ಉದ್ದಕ್ಕೆ ತುರ್ತು ಸಂರಕ್ಷಣೆ ಕ್ರಮವಾಗಿ ಮರಳು ಚೀಲಗಳ ಬಂಡಿಂಗ್ ಹಾಗೂ ಕಲ್ಲುಗಳ ತಾತ್ಕಾಲಿಕ ತಡೆಗೋಡೆಗಳನ್ನು ನಿರ್ಮಿಸಿ ಸಾರ್ವಜನಿಕ ಆಸ್ತಿಪಾಸ್ತಿ ರಕ್ಷಣೆ ಮಾಡಲಾಗಿರುತ್ತದೆ

ಈ) ಕುಂದಾಪುರ ತಾಲ್ಲೂಕಿನ ಪಡುವರಿಯಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಡಿ 1170 ಮೀ ಉದ್ದಕ್ಕೆ ವಿನ್ಯಾಸದಂತೆ ಕಲ್ಲಿನಿಂದ ತಡೆಗೋಡೆ ನಿರ್ಮಿಸುವ ಕಾಮಗಾರಿ ಪ್ರಾರಂಭ ಹಂತದಲ್ಲಿದೆ "ರಾಷ್ಟ್ರೀಯ ಕರಾವಳಿ ತೀರ ಸಂರಕ್ಷಣೆ ಯೋಜನೆಯಡಿ" (National Coastal Protection Project) ರೂ 136 00 ಕೋಟಿ (ರೂ 292 00 ಕೋಟಿ ಪರಿಷ್ಕೃತ) ಅಂದಾಜು ವೆಚ್ಚದಲ್ಲಿ ಸುಮಾರು 50 ಕಿ ಮೀ ಉದ್ದಕ್ಕೆ ತಡೆಗೋಡೆ ನಿರ್ಮಿಸುವ ಪ್ರಸ್ತಾವನೆ ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ

ಮಂಗಳೂರು ತಾಲ್ಲೂಕಿನ ಉಳ್ಳಾಲದಲ್ಲಿ ರೂ 45 25 ಕೋಟಿ ಅಂದಾಜಿನಲ್ಲಿ "T" ಗ್ರಾಯನ್ಸ್ ನಿರ್ಮಿಸುವ ಪ್ರಸ್ತಾವನೆ ಅಥವಾ ರೂ 8 3 ಕೋಟಿ ಅಂದಾಜು ವೆಚ್ಚದಲ್ಲಿ ಸ್ಪೆಬಿಪ್ಲೇಜ್ ತಂತ್ರಜ್ಞಾನವನ್ನು ಅಳವಡಿಸಿ ಸಮುದ್ರ ಕೊರೆತ ತಡೆಗಟ್ಟುವ ಪ್ರಸ್ತಾವನೆಗಳು ಸರ್ಕಾರದ ಪರಿಶೀಲನೆಯಲ್ಲಿದೆ

ಈ) ಕೇರಳ ಮಾದರಿಯ ಶಾಶ್ವತ ಪರಿಹಾರದ ಯಾವುದೆ ಪ್ರಸ್ತಾವನೆ ಪರಿಶೀಲನೆಯಲ್ಲಿ ಇರುವುದಿಲ್ಲ

943 (906) ಶ್ರೀ ರಘುಪತಿ ಭಟ್ ಕೆ (ಉಡುಪಿ) ಮಾನ್ಯ ಕಾರ್ಮಿಕ, ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಕೇಂದ್ರ ಸರ್ಕಾರವು 2000ನೇ ಇಸವಿಯಲ್ಲಿ ರಾಷ್ಟ್ರವ್ಯಾಪ್ತಿ ಮನಿಸಾನ ಸಿಂಗ್ ವೇತನ ಆಯೋಗದ ಶಿಫಾರಸ್ಸಿನ ಮೂಲಕ ಪತ್ರಕರ್ತರ ಮತ್ತು ಪತ್ರಕರ್ತೆಯರ ನೌಕರರ ವೇತನ ಪರಿಷ್ಕರಣೆಗೆ ಕ್ರಮ ಕೈಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹೌದಾದಲ್ಲಿ, ರಾಜ್ಯದ ಯಾವ ಯಾವ ಪತ್ರಿಕಾ ಸಂಸ್ಥೆಗಳು ತಮ್ಮ ನೌಕರರಿಗೆ ವೇತನ ಪರಿಷ್ಕರಣೆ ಮಾಡಿವೆ,